**ಅಂಗನವಾಡಿಗಳ ಪುನರಾರಂಭ: ಶಿಕ್ಷಕರು ಮಾಡಬೇಕಾದುದು ಏನು**

**-ಯೋಗೇಶ್ ಜಿ.ಆರ್.**

ಅಂಗನವಾಡಿ ಕೇಂದ್ರಗಳು ಕೊರೊನಾ ಸಾಂಕ್ರಾಮಿಕ ರೋಗದಿಂದಾಗಿ 2020ರ ಮಾರ್ಚ್‌ನಿಂದ ಮುಚ್ಚಿವೆ. ಈಗ ಸುಮಾರು ಎರಡು ವರ್ಷಗಳಿಂದ ಅಂಗನವಾಡಿಗೆ ಹೋಗುವ ಮಕ್ಕಳು ಅಂಗನವಾಡಿಯಲ್ಲಿನ ಸುರಕ್ಷಿತ ವಾತಾವರಣ ಮತ್ತು ಪೋಷಣೆ ಹಾಗು ಕಲಿಕೆಯ ಅನುಭವಗಳನ್ನು ಕಳೆದುಕೊಂಡಿದ್ದಾರೆ. ಎಷ್ಟೋ ಮಕ್ಕಳು ಅಂಗನವಾಡಿಯ ಮೆಟ್ಟಿಲು ಹತ್ತದೆಯೇ ನೇರವಾಗಿ ಪ್ರಾಥಮಿಕ ಹಂತಕ್ಕೆ ದಾಖಲಾಗುತ್ತಿದ್ದಾರೆ. ಪ್ರಸ್ತುತ, ಈ ಪೈಕಿ ಎಷ್ಟೋ ಮಕ್ಕಳು ತಮ್ಮ ಕೆಲಸಗಳಿಗೆ (ವಿಶೇಷವಾಗಿ ಮೈದಾನದಲ್ಲಿ) ತಮ್ಮ ಹೆತ್ತವರ ಜೊತೆಗೆ ಹೋಗುತ್ತಿದ್ದಾರೆ ಅಥವಾ ತಮ್ಮ ಅಜ್ಜ-ಅಜ್ಜಿಯರ ಸುಪರ್ದಿಯಲ್ಲಿದ್ದಾರೆ.

**ಸಣ್ಣ ಮಕ್ಕಳ ಮೇಲೆ ಲಾಕ್‌ಡೌನ್ ಪರಿಣಾಮ**

**ಮೆದುಳಿನ ಬೆಳವಣಿಗೆ ಮೇಲೆ ಪರಿಣಾಮ**

ಮಗುವಿನ ಎಳೆಯ ವಯಸ್ಸು (0-8) ಬೆಳವಣಿಗೆ ಮತ್ತು ಅಭಿವೃದ್ಧಿಯ ಅವಧಿ. ಈ ವಯಸ್ಸಿನಲ್ಲಿ ಉತ್ತಮ ಮಾನಸಿಕ ಮತ್ತು ಸಾಮಾಜಿಕ ಉತ್ತೇಜನ ಸಿಕ್ಕಿದಲ್ಲಿ, ಮೆದುಳಿನ ನರಕೋಶಗಳ ಸಂಪರ್ಕಗಳು ಅನೂಹ್ಯ ರೀತಿಯಲ್ಲಿ ಏರ್ಪಟ್ಟು ಹೆಚ್ಚು ತೀವ್ರವಾಗಿ ಬೆಳೆಯುತ್ತವೆ. ಎಳೆಯ ವಯಸ್ಸಿನಲ್ಲಿ ಪ್ರೌಢತೆ ಮತ್ತು ಬಲವೃದ್ಧಿಯ ಹಾದಿಯು ಮಕ್ಕಳ ಸಮಗ್ರ ಬೆಳವಣಿಗೆಗೆ ದೊಡ್ಡ ಕೊಡುಗೆ ನೀಡುತ್ತವೆ. ಅದು ಸಾಧ್ಯವಾಗಬೇಕಾದರೆ ಮಕ್ಕಳು ಎಲ್ಲಾ ಆಯಾಮಗಳಲ್ಲಿ ಅನುಭವ ಪಡೆಯಬೇಕು. ಅಂದರೆ, ದೈಹಿಕ/ಮೋಟಾರ್, ಭಾಷೆ, ಬೌದ್ಧಿಕ, ಸಾಮಾಜಿಕ, ಭಾವನಾತ್ಮಕ ಮತ್ತು ಕ್ರಿಯಾತ್ಮಕವಾಗಿ ಅವರು ಅನುಭವಗಳನ್ನು ಪಡೆಯಬೇಕು. ಆದ್ದರಿಂದ, ಅವರ ಬೆಳವಣಿಗೆಯ ದೃಷ್ಟಿಯಿಂದ ಈ ಎಲ್ಲಾ ಆಯಾಮಗಳನ್ನು ಪರಿಪೂರ್ಣವಾಗಿ ಅನುಭವಿಸಬೇಕು. ಈ ಮೂಲಕ ಅವರ ಬೆಳವಣಿಗೆ ಮತ್ತು ದೀರ್ಘಕಾಲೀನ ಪ್ರಯೋಜನಕ್ಕಾಗಿ ಕಲಿಯಬೇಕು.

ಲಾಕ್‌ಡೌನ್ ವೇಳೆ ಮತ್ತು ನಂತರ ಅಂಗನವಾಡಿಗಳನ್ನು ಮುಚ್ಚಿದ್ದರಿಂದ ಮಕ್ಕಳು ವ್ಯವಸ್ಥಿತ

ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವ, ಶಿಕ್ಷಕರು ಮತ್ತು ಮಕ್ಕಳೊಂದಿಗೆ ಬೆರೆಯುವ, ಉತ್ತಮ ಶೈಕ್ಷಣಿಕ ಮತ್ತು ಸಾಮಾಜಿಕ ಬೆಳವಣಿಗೆಗೆ ಕಾರಣವಾಗಿರುವಂತಹ ಗುಣಮಟ್ಟದ ಸಂವಹನಗಳನ್ನು ಕ್ರಿಯಾಶೀಲಗೊಳಿಸುವ ಕಾರ್ಯಗಳು, ಮುಖ್ಯವಾಗಿ ದುರ್ಬಲ ಮನೆ ವಾತಾವರಣದಿಂದ ಬಂದಂತಹ ಮಕ್ಕಳು ಈ ಅವಕಾಶದಿಂದ ವಂಚಿತರಾಗಿದ್ದಾರೆ. ಮಕ್ಕಳು ತಮ್ಮ ಗಮನವನ್ನು ಕೇಂದ್ರೀಕರಿಸುವ, ಭಾವನೆಗಳನ್ನು ನಿಭಾಯಿಸುವ ಮತ್ತು ವರ್ತನೆಗಳನ್ನು ನಿಯಂತ್ರಿಸಿಕೊಳ್ಳುವ ಸಾಮರ್ಥ್ಯವನ್ನು ಬೆಳೆಸಿಕೊಳ್ಳುವ ಈ ವಯಸ್ಸಿನಲ್ಲಿ ಶಾಲಾಪೂರ್ವ ಶಾಲೆಯ ವಾತಾವರಣವು ಅವರನ್ನು ಶಾಲಾ ವಾತಾವರಣಕ್ಕೆ ಒಗ್ಗಿಕೊಳ್ಳುವಂತೆ ತಯಾರು ಮಾಡುತ್ತದೆ. ಮಕ್ಕಳು ಅಂತಹ ಅವಕಾಶದಿಂದ ವಂಚಿತರಾಗುವುದರಿಂದ ಮುಂದಿನ ದಿನಗಳಲ್ಲಿ ಸಾಮಾಜಿಕ ಅಂತರವನ್ನೂ ಹೆಚ್ಚಿಸುತ್ತದೆ.

**ಪೌಷ್ಟಿಕಾಂಶದ ಪರಿಣಾಮ**

ಅಂಗನವಾಡಿ ಮಕ್ಕಳಿಗೆ, ಸಮಗ್ರ ಶಿಶು ಅಭಿವೃದ್ಧಿ ಸೇವೆಗಳ (ಐಸಿಡಿಎಸ್) ಯೋಜನೆಯ ಭಾಗವಾಗಿ, ಮಧ್ಯಾಹ್ನದ ಬಿಸಿಯೂಟ ನೀಡಲಾಗುತ್ತಿತ್ತು. ಬಹುಶಃ ಆ ಮಕ್ಕಳಿಗೆ ಇಡೀ ದಿನದಲ್ಲಿ ಸಿಗುತ್ತಿದ್ದ ಪೌಷ್ಟಿಕ ಆಹಾರ ಅದೊಂದೇ. ಈ ಊಟದಲ್ಲಿ ಮೊಟ್ಟೆ, ಹಾಲು ಹಾಗೂ ಕೆಲವು ರಾಜ್ಯಗಳಲ್ಲಿ ಬಲವರ್ಧಕ ತಿಂಡಿಗಳು ಒಳಗೊಂಡಿರುತ್ತವೆ. ಲಾಕ್‌ಡೌನ್ ಅವಧಿಯಲ್ಲಿ, ಮಧ್ಯಾಹ್ನದ ಊಟ (ಎಂಡಿಎಂ) ಯೋಜನೆಯಲ್ಲಿ ವ್ಯತ್ಯಯವಾಗಿದ್ದು, ಮಕ್ಕಳ ಒಟ್ಟಾರೆ ಪೌಷ್ಟಿಕಾಂಶದ ಮಟ್ಟದ ಮೇಲೆ ಪರಿಣಾಮ ಬೀರಿರುತ್ತದೆ. ಎಡಿಎಂನ ಬದಲಾಗಿ, 'ದಿನಸಿಯನ್ನು ಮನೆಗೊಯ್ಯಿರಿ' ಎಂಬ ಯೋಜನೆಯಡಿ ಮಾಸಿಕ ದಿನಸಿಯನ್ನು ಅಂಗನವಾಡಿ ಶಿಕ್ಷಕರು ಪೂರೈಸುತ್ತಿದ್ದರು. ಕೆಲವು ಸ್ಥಳಗಳಲ್ಲಿ ಈ ದಿನಸಿ ಪೂರೈಕೆ ವ್ಯತ್ಯಯವಾಗುತ್ತಿತ್ತು. ಪೂರೈಕೆಯಾದ ಕಡೆಗಳಲ್ಲಿ ದಿನಸಿಯ ಪ್ರಮಾಣದಲ್ಲಿ ಕಡಿಮೆಯಾಗುತ್ತಿತ್ತು.

ಪೋಷಕರ ಜೀವನದ ಮೇಲೆಯೂ ಲಾಕ್‌ಡೌನ್ ಪರಿಣಾಮ ಬೀರಿದ್ದರಿಂದ, ಮಕ್ಕಳಿಗಾಗಿ ಅಂಗನವಾಡಿಗಳ ಮೂಲಕ ಪೂರೈಕೆಯಾಗುತ್ತಿದ್ದ ದಿನಸಿ ಸಹಜವಾಗಿಯೇ ಇಡೀ ಕುಟುಂಬಕ್ಕೆ ಹಂಚಿಕೆಯಾಗುತ್ತಿತ್ತು. ಪ್ರತಿದಿನ ಮಗು ತಿನ್ನಬೇಕಾಗಿದ್ದ ಮೊಟ್ಟೆ ಮನೆಮಂದಿಗೆ ಸಾಂಬಾರಿಗೆ ಬಳಕೆಯಾಗುತ್ತಿತ್ತು. ಮನೆಯಲ್ಲಿ, ಮಕ್ಕಳಿಗೆ ಕಷ್ಟಪಟ್ಟು ದಿನಕ್ಕೆರಡು ಬಾರಿ ಊಟ ಸಿಗುತ್ತಿತ್ತು,

ಕೆಲವೊಮ್ಮೆ ಈ ಊಟವು ಬರಿ ಒಂದು ಕಪ್ ಚಹಾ ಮತ್ತು ಉಪ್ಪಿನ ಬಿಸ್ಕತ್ತಿನ ರೂಪದಲ್ಲಿ ಕೊಡಲಾಗುತ್ತಿತ್ತು. ದಿನದ ಮುಖ್ಯ ಊಟವೆಂದರೆ, ಹಿಂದಿನ ದಿನ ಮಿಕ್ಕಿದ ಅನ್ನಕ್ಕೆ ನೀರು ಬೆರೆಸಿ, ಉಪ್ಪು ಮತ್ತು ಉಪ್ಪಿನಕಾಯಿ ಅಷ್ಟೇ ಆಗಿರುತ್ತಿತ್ತು. ಅಥವಾ ಮೆಣಸಿನ ಪುಡಿ, ಹುಣಸೆಹುಳಿ, ಬೇಯಿಸಿದ ಬೇಳೆ, ಉಪ್ಪು ಮತ್ತು ಸ್ಥಳೀಯವಾಗಿ ಸಿಗುವ ತರಕಾರಿಗಳ ಜೊತೆಗೆ ಅನ್ನ ಅಥವಾ ರೊಟ್ಟಿಯನ್ನು ಸೇವಿಸಲಾಗುತ್ತಿತ್ತು. ಹೆಚ್ಚಿನಂಶ, ಇದನ್ನೇ ರಾತ್ರಿಯ ಊಟಕ್ಕೂ ನೀಡಲಾಗುತ್ತಿತ್ತು.

ಸಮಗ್ರ ರಾಷ್ಟ್ರೀಯ ಪೌಷ್ಟಿಕ ಸಮೀಕ್ಷೆ 2016-18ರ ಪ್ರಕಾರ, ಶಾಲಾಪೂರ್ವ ಹಂತದ ಮಕ್ಕಳ ಪೈಕಿ ಶೇಕಡಾ 35 ರಷ್ಟು ಮಕ್ಕಳು ಕುಂಠಿತ ಬೆಳವಣಿಗೆ, ಶೇಕಡಾ 17ರಷ್ಟು ಮಕ್ಕಳು ವ್ಯರ್ಥ, ಶೇಕಡಾ 33ರಷ್ಟು ಮಕ್ಕಳು ಕಡಿಮೆ ತೂಕ ಹಾಗೂ ಶೇಕಡಾ 11ರಷ್ಟು ಮಕ್ಕಳು ತೀವ್ರವಾದ ಅಪೌಷ್ಟಿಕತೆಯಿಂದ ಬಳಲುತ್ತಿರುತ್ತಾರೆ. ಅಂಗನವಾಡಿಗಳ ಮುಚ್ಚುವಿಕೆಯಿಂದಾಗಿ ಈ ಪರಿಸ್ಥಿತಿ ಇನ್ನಷ್ಟು ಹದಗೆಟ್ಟು, ಒಂದು ತಲೆಮಾರಿನ ಮಕ್ಕಳ ದೀರ್ಘಕಾಲೀನ ಬೆಳವಣಿಗೆಯ ಮೇಲೆಯೇ ದುಷ್ಪರಿಣಾಮ ಬೀರುವ ಅಪಾಯವಿದೆ.

**ವಂಚಿತ ಅವಕಾಶ ಮತ್ತು ಶಿಕ್ಷಕರು ಮಾಡಬೇಕಾದುದೇನು?**

ಸಾಮಾನ್ಯವಾಗಿ ಎರಡೂವರೆ ವರ್ಷ ದಾಟಿದ ಮಕ್ಕಳು ಅಂಗನವಾಡಿಗೆ ದಾಖಲಾಗುತ್ತಾರೆ. ವರ್ಷದ ಆರಂಭದಲ್ಲಿ ಈ ವಯಸ್ಸಿನ ಮಕ್ಕಳನ್ನು ದೊಡ್ಡ ಪ್ರಮಾಣದಲ್ಲಿ ದಾಖಲು ಮಾಡಲಾಗುತ್ತದೆ. ಒಂದು ವರ್ಷದಲ್ಲಿ, ಒಂದು ಅಂಗನವಾಡಿಯಲ್ಲಿ ಸುಮಾರು ಹೊಸದಾಗಿ ದಾಖಲಾದ ಮಕ್ಕಳಲ್ಲಿ ಶೇಕಡಾ 30-40ರಷ್ಟು ಮಕ್ಕಳು, ಒಂದೂವರೆ ವರ್ಷಗಳಿಂದ ಅಂಗನವಾಡಿಗೆ ಹೋಗುತ್ತಿರುವ ಮಕ್ಕಳಲ್ಲಿ ಶೇಕಡಾ 30-40ರಷ್ಟು ಮಕ್ಕಳು, ಒಂದೂವರೆ ವರ್ಷಕ್ಕಿಂತಲೂ ಹೆಚ್ಚು ಕಾಲದಿಂದ ಅಂಗನವಾಡಿಗೆ ಹೋಗುತ್ತಿರುವ ಇತರ ಶೇಕಡಾ 20-30ರಷ್ಟು ಮಕ್ಕಳು ಆ ಕೇಂದ್ರದಲ್ಲಿರುತ್ತಾರೆ. ಅಂಗನವಾಡಿ ಶಿಕ್ಷಕರು ಈ ಎಲ್ಲಾ ರೀತಿಯ ಮಕ್ಕಳನ್ನು ನಿಭಾಯಿಸುವಲ್ಲಿ ಪಳಗಿರುತ್ತಾರೆ. ಈಗ ಎರಡು ವರ್ಷಗಳಿಂದೀಚೆ ಈ ವಯಸ್ಸಿನ ಎಲ್ಲಾ ಮಕ್ಕಳು ಅಂಗನವಾಡಿಗೆ ಹೋಗದ ಕಾರಣ ಎಲ್ಲಾ ಮಕ್ಕಳು ಒಂದೇ ತೆರನಾಗಿರುತ್ತಾರೆ. ಒಮ್ಮೆ ಅಂಗನಾಡಿಗಳು ಕಾರ್ಯಾರಂಭವಾದರೆ, ಶಿಕ್ಷಕರು ಅವರನ್ನು ಪ್ರತಿದಿನ ನಿಗದಿತ ಚಟುವಟಿಕೆಗಳಲ್ಲಿ ತೊಡಗಿಸುತ್ತಾರೆ.

ಅಂಗನವಾಡಿಗಳಲ್ಲಿ ಮಾಸಿಕ ಪಠ್ಯವನ್ನು ಕೈಗೆತ್ತಿಕೊಳ್ಳುವ ಬದಲಾಗಿ, ಮಕ್ಕಳು ಅಂಗನವಾಡಿ ಕೇಂದ್ರಗಳಲ್ಲಿ ಆರಾಮವಾಗಿ ಕುಳಿತುಕೊಳ್ಳುವಂತೆ ಮಾಡುವುದಕ್ಕೆ ಆದ್ಯತೆ ಕೊಡಬೇಕು. ಅರ್ಥಪೂರ್ಣ ಹಾಗೂ ಸರಳವಾದ ಹಾಡುಗಳು, ಕತೆಗಳು, ಒಳಾಂಗಣ ಮತ್ತು ಹೊರಾಂಗಣ ಆಟಗಳು ಮತ್ತು ಚಿತ್ರ ಬರೆಯುವಂತಹ ಚಟುವಟಿಕೆಗಳಲ್ಲಿ ಅವರನ್ನು ತೊಡಗಿಸಿಕೊಳ್ಳುವಂತೆ ಮಾಡಬಹುದು. ಆರಂಭದ ನಾಲ್ಕರಿಂದ ಆರು ತಿಂಗಳ ಅವಧಿಯವರೆಗೆ ಸಾಮಾನ್ಯವಾದ ಮತ್ತು ಮೂಲಭೂತವಾದ ಚಟುವಟಿಕೆಗಳನ್ನು ಎಲ್ಲಾ ವಯಸ್ಸಿನ ಮಕ್ಕಳಿಗೆ ಪ್ರತಿನಿತ್ಯ ಕೈಗೊಂಡು, ನಂತರ ಅವರ ವಯಸ್ಸಿಗೆ ಅನುಗುಣವಾದ ಚಟುವಟಿಕೆಗಳನ್ನು ಮಾಡಿಸಬಹುದು.

ಇದಲ್ಲದೆ, ಶಿಕ್ಷಕರು ಮಕ್ಕಳೊಂದಿಗೆ ಸ್ನೇಹಮಯ ಸಂವಾದವನ್ನು ಹೊಂದಿರಬೇಕು ಹಾಗೂ ಮಕ್ಕಳು ತಮ್ಮ ಭಾವನೆಗಳನ್ನು ವ್ಯಕ್ತಪಡಿಸಲು ಮತ್ತು ತಮಗೆ ಏನು ಹಾಗೂ ಹೇಗೆ ಅನಿಸುತ್ತಿದೆ ಎಂಬುದನ್ನು ಹೇಳಿಕೊಳ್ಳಲು ಅವಕಾಶ ಕಲ್ಪಿಸಿಕೊಡಬೇಕು. ಶಿಕ್ಷಕರು ಮಕ್ಕಳಿಗೆ ಕೊವಿಡ್-19 ಕುರಿತ ತಮ್ಮ ಆತಂಕಗಳನ್ನು ಹಂಚಿಕೊಳ್ಳಲು, ಪ್ರಶ್ನೆ ಕೇಳಲು, ತಮ್ಮ ಭಯ ಮತ್ತು ಭಾವನೆಗಳನ್ನು ಹಂಚಿಕೊಳ್ಳಲು ಹಾಗೂ ಅವರು ತಮ್ಮ ಕುಟುಂಬ ಮತ್ತು ನೆರೆಮನೆಗಳಲ್ಲಿ ಕಂಡುಂಡ ಪರಿಣಾಮಗಳ ಬಗ್ಗೆ ಹೇಳಿಕೊಳ್ಳಲು ಅವಕಾಶ ಕೊಡಬೇಕು.

ಮಕ್ಕಳಲ್ಲಿ ಸ್ವಚ್ಛತೆ ಮತ್ತು ದೈಹಿಕ ಸ್ವಾಸ್ಥ್ಯದ ಬಗ್ಗೆ ವಿಶೇಷ ಕಾಳಜಿ ವಹಿಸಬೇಕು, ಸ್ವಚ್ಛತೆಯ ಉತ್ತಮ ಅಭ್ಯಾಸಗಳನ್ನು ರೂಢಿಸಿಕೊಳ್ಳುವಂತೆ ಹೇಳಬೇಕು. ಬಾಯಿ ಮತ್ತು ಮೂಗಿನ ಸ್ವಚ್ಛತೆ ಕಾಪಾಡುವುದು, ಸೀನುವಾಗ ಮತ್ತು ಕೆಮ್ಮುವಾಗ ಬಾಯಿ ಮತ್ತು ಮೂಗನ್ನು ಮುಚ್ಚಿಕೊಳ್ಳುವುದು, ಆಗಾಗ ಕೈಗಳನ್ನು ತೊಳೆಯುತ್ತಿರುವುದು ಮತ್ತು ಕಣ್ಣು-ಮೂಗು-ಬಾಯಿಯನ್ನು ಮುಟ್ಟುವುದನ್ನು ತಪ್ಪಿಸುವುದು- ಹೀಗೆ.

**ತಂಡ 1 - 3 ರಿಂದ 4 ವರ್ಷದೊಳಗಿನ ಮಕ್ಕಳು** <u>**ಅವರು ಯಾವುದರಿಂದ ವಂಚಿತರಾಗಿರಬಹುದು:**</u> ಈ ಮಕ್ಕಳು ಯಾವತ್ತೂ ಅಂಗನವಾಡಿಗೆ ಎಂದೂ ಹೋಗದೇ ಇರುವವರು. ಅವರು ತಮ್ಮ ವಯಸ್ಸಿನ ಮಕ್ಕಳೊಂದಿಗೆ ಅಥವಾ ಸ್ವಲ್ಪ ದೊಡ್ಡ ಮಕ್ಕಳೊಂದಿಗೆ ಅಂಗನವಾಡಿಯಲ್ಲಿ ಎಂದೂ ಬೆರೆತವರಲ್ಲ.

ಅಲ್ಲದೆ, ತಮ್ಮ ವಯಸ್ಸಿಗೆ ಅನುಗುಣವಾದ ಪಠ್ಯಕ್ರಮದಿಂದಲೂ ವಂಚಿತರಾದವರು. ಹಾಗಾದರೂ ಅವರು 4+ ವಯಸ್ಸಿನ ಗುಂಪಿನವರೊಂದಿಗೆ 6-8 ತಿಂಗಳು ಇರಬಹುದು.

**ಶಿಕ್ಷಕರು ಏನು ಮಾಡಬಹುದು:** ಈ ಮಕ್ಕಳು ಅಂಗನವಾಡಿಗಳಿಗೆ ಹಾಜರಾಗದೇ ಇರಬಹುದು, ಆದ್ದರಿಂದ ಅವರನ್ನು ಮೊದಲು ಅಂಗನವಾಡಿ ಕೇಂದ್ರಗಳಿಗೆ ದಾಖಲಿಸಿ, ಶಿಕ್ಷಕರು ಅವರಿಗೆ ಸ್ವಚ್ಛತೆಯ ಅಭ್ಯಾಸಗಳನ್ನು ಮಾಡಿಸಲು ಗಮನ ಕೊಡಬೇಕು. ಈ ಮಕ್ಕಳು ಒಮ್ಮೆ ಅಂಗನವಾಡಿಯ ವಾತಾವರಣಕ್ಕೆ ಹೊಂದಿಕೊಂಡ ಮೇಲೆ ಶಿಕ್ಷಕರು ಅವರೊಂದಿಗೆ ಮೌಖಿಕ ಸಮಯವನ್ನು (ಎರಡರಿಂದ ಎರಡೂವರೆ ಗಂಟೆ) ಮಾತುಕತೆ, ಕತೆ ಹೇಳುವುದು, ಚಿಣ್ಣರ ಪದ್ಯಗಳನ್ನು ಹೇಳುವುದು ಮತ್ತು ಆಟವಾಡುವ ಮೂಲಕ ಕಳೆಯಬೇಕು.

**ಗುಂಪು 2 – 4 ರಿಂದ 5 ವರ್ಷದೊಳಗಿನ ಮಕ್ಕಳು**

**<u>ಅವರು ಯಾವುದರಿಂದ ವಂಚಿತರಾಗಿರಬಹುದು:</u>** ಈ ವಯಸ್ಸಿನ ಮಕ್ಕಳು 2019 ಅಥವಾ 2020ರ ಆರಂಭದಲ್ಲಿ ಅಂಗನವಾಡಿಗಳಲ್ಲಿ 6 ರಿಂದ 9 ತಿಂಗಳು ಕಳೆದಿರಬಹುದು. ತಮ್ಮ ವಯಸ್ಸಿನ ಅಥವಾ ಸ್ವಲ್ಪ ದೊಡ್ಡ ಮಕ್ಕಳೊಂದಿಗೆ ಬೆರೆಯುವುದರಿಂದ ಹಾಗೂ ತಮ್ಮ ವಯಸ್ಸಿಗೆ ಅನುಗುಣವಾದ ಪಠ್ಯಕ್ರಮದಲ್ಲಿ, ವಿಶೇಷವಾಗಿ, ಸಂಖ್ಯಾ-ಪೂರ್ವ ಮತ್ತು ಆರಂಭಿಕ-ಸಾಕ್ಷರತಾ ಪರಿಕಲ್ಪನೆಗಳಲ್ಲಿ ತೊಡಗಿಸಿಕೊಳ್ಳುವುದರಿಂದ ವಂಚಿತರಾಗಿರಬಹುದು.

**ಶಿಕ್ಷಕರು ಏನು ಮಾಡಬಹುದು:** ಒಂದನೇ ಗುಂಪಿನ ಮಕ್ಕಳೊಂದಿಗೆ ಬೆರೆಯುವುದರ ಜೊತೆಗೆ, ಶಿಕ್ಷಕರು, ಆರು ತಿಂಗಳ ಬಳಿಕ, ಪೂರ್ವ-ಸಂಖ್ಯಾಭ್ಯಾಸ ಮತ್ತು ಆರಂಭಿಕ-ಸಾಕ್ಷರತಾ ಪರಿಕಲ್ಪನೆಗಳ ಕಡೆಗೆ ಹೆಚ್ಚು ಒತ್ತು ಕೊಡುವುದನ್ನು ಪ್ರಾರಂಭಿಸಬಹುದು. ಇದರಿಂದ ಅವರು ಶಾಲೆಗೆ ಹೋಗಲು ಸಜ್ಜಾಗುತ್ತಾರೆ.

**ಗುಂಪು 3: 5 ವರ್ಷ ಮೇಲ್ಪಟ್ಟ ಮಕ್ಕಳು:** ಈ ವಯಸ್ಸಿನ ಮಕ್ಕಳು ಲಾಕ್‌ಡೌನ್‌ಗೂ ಹಿಂದಿನ ಆರರಿಂದ

ಒಂಬತ್ತು ತಿಂಗಳು  ಮೂಲಭೂತ ಪರಿಕಲ್ಪನೆಗಳನ್ನು ಕಲಿತಿರಬಹುದು. ಬೇರೆ ಬೇರೆ ಕೌಶಲ್ಯ ಕ್ಷೇತ್ರಗಳಲ್ಲಿ ಬೆಳವಣಿಗೆಯಾಗುವಂತಹ ಹೆಚ್ಚಿನ ಅವಕಾಶಗಳನ್ನು ಕಳೆದುಕೊಂಡಿರುವುದು ಮಾತ್ರವಲ್ಲದೆ, ಪೂರ್ವ-ಸಂಖ್ಯಾಶಾಸ್ತ್ರ ಮತ್ತು ಆರಂಭಿಕ-ಸಾಕ್ಷರತಾ ಪರಿಕಲ್ಪನೆಗಳಿಂದಲೂ ಅವರು ವಂಚಿತರಾಗಿರುತ್ತಾರೆ. ಪ್ರಾಥಮಿಕ ತರಗತಿಗಳಿಗೆ ದಾಖಲಾಗುವುದಕ್ಕೆ ಈ ಪರಿಕಲ್ಪನೆಗಳು ಅತ್ಯವಶ್ಯವಾಗಿರುತ್ತವೆ.

**ಶಿಕ್ಷಕರು ಏನು ಮಾಡಬಹುದು:** ಈ ವಯಸ್ಸಿನ ಮಕ್ಕಳು ನೇರವಾಗಿ ಪ್ರಾಥಮಿಕ ಶಾಲೆಗೆ (ಒಂದನೇ ತರಗತಿ) ದಾಖಲಾಗಬಹುದು. ಆದ್ದರಿಂದ, ಪ್ರಾಥಮಿಕ ಶಾಲಾ ಶಿಕ್ಷಕರು ಶಾಲಾ ಪಠ್ಯಕ್ರಮವನ್ನು ಕೈಗೆತ್ತಿಕೊಳ್ಳುವುದಕ್ಕೂ ಮುನ್ನ, ಆರಂಭದ 3ರಿಂದ 6 ತಿಂಗಳು ಅವರನ್ನು ಶಾಲಾ ವಾತಾವರಣಕ್ಕೆ ಸಜ್ಜುಗೊಳಿಸುವ ಪ್ರಕ್ರಿಯೆಯಲ್ಲಿ ಕಳೆಯಬಹುದು. ಶಾಲೆ ಆರಂಭಕ್ಕೂ ಮೊದಲಿನ ಕೆಲವು ತಿಂಗಳುಗಳನ್ನು ಇವರು ಅಂಗನವಾಡಿಯ ಚಟುವಟಿಕೆಗಳಲ್ಲಿ ಕಳೆಯಬಹುದು.

ಅಂಗನವಾಡಿಗಳ ಮುಚ್ಚುವಿಕೆಯಿಂದಾಗಿ ಮಕ್ಕಳಿಗೆ ಎದುರಾಗಿರಬಹುದಾದ ಪೌಷ್ಟಿಕ ಆಹಾರದ ಕೊರತೆಯಿಂದ ಹೊರಬರಲು, ಹೆಚ್ಚುವರಿ ಪೂರಕ ಆಹಾರವನ್ನು ಅಂದರೆ, ಮೊಟ್ಟೆ, ಬಲವರ್ಧಕ ಹಾಲು ಮತ್ತು ತಿಂಡಿಗಳನ್ನು ಅಂಗನವಾಡಿ ಆರಂಭವಾದ ಆರು ತಿಂಗಳವರೆಗೂ ಅವರಿಗೆ ನೀಡುವುದನ್ನು ಯೋಜಿಸಬಹುದು.

***///ಕೋಷ್ಟಕ ಇದೆ////***

**ಹಸಿರು ಬಣ್ಣ:** ಅಂಗನವಾಡಿಗೆ ಹಾಜರಾಗುವ ಮಕ್ಕಳು

**ಕೆಂಪು ಬಣ್ಣ:** ಕೋವಿಡ್‌ನಿಂದಾಗಿ ಮುಚ್ಚಿರುವ ಅಂಗನವಾಡಿಗಳ ಪ್ರಮಾಣ

**ನೀಲಿ ಬಣ್ಣ:** ಮೇ ತಿಂಗಳಲ್ಲಿ ಮುಚ್ಚಿರುವ ಅಂಗನವಾಡಿಗಳು

**ಖಾಲಿ:** ವರ್ಷದ ತಿಂಗಳುಗಳು

**ಕಂದು ಬಣ್ಣ:** ಕೆಲವು ರಾಜ್ಯಗಳಲ್ಲಿ ಅಂಗನವಾಡಿಗಳು ತೆರೆದಿರುವುದು.

**ಈಗ ಮತ್ತೆ ಶುರು ಮಾಡಿ**

ಪ್ರಾಥಮಿಕ ಶಾಲೆ, ಹಿರಿಯ ಪ್ರಾಥಮಿಕ ಶಾಲೆ ಅಥವಾ ಮಾಧ್ಯಮಿಕ ಶಾಲೆಗಳಿಗಿಂತಲೂ ಮೊದಲು ಸ್ಥಳೀಯವಾಗಿ ಚಿರಪರಿಚಿತವಾಗಿರುವ ಅಂಗನವಾಡಿಗಳನ್ನು ಪುನರಾರಂಭಿಸಬೇಕು. ಯಾವುದೇ ಅಂಗನವಾಡಿಯನ್ನು ತೆರೆಯಬೇಕು ಅಥವಾ ಮುಚ್ಚಬೇಕು ಎಂಬ ತೀರ್ಮಾನವನ್ನು ರಾಜ್ಯ ಮಟ್ಟದಲ್ಲಿ ತೆಗೆದುಕೊಳ್ಳುವುದಕ್ಕಿಂತ ಸಂಬಂಧಿತ ಗ್ರಾಮ ಪಂಚಾಯತ್ ಮಟ್ಟದಲ್ಲಿ ತೆಗೆದುಕೊಳ್ಳಬೇಕು. ಕಳೆದ ಆರು ತಿಂಗಳಿಂದ ಕೊವಿಡ್ ಮುಕ್ತವಾಗಿರುವ ಎಷ್ಟೋ ಗ್ರಾಮಗಳಿದ್ದು, ಅಂತಹ ಪ್ರದೇಶಗಳಲ್ಲಿ ಅಂಗನವಾಡಿಗಳನ್ನು ತೆರೆಯಬಹುದು.

ಒಬ್ಬ ಅಂಗನವಾಡಿ ಶಿಕ್ಷಕರು ಹೇಳುವಂತೆ, ಹಳ್ಳಿಗಳಲ್ಲಿ ಹಲವಾರು ಮಕ್ಕಳು ತಮ್ಮ ತಮ್ಮ ಗಲ್ಲಿಗಳಲ್ಲಿ ಇತರ ಮಕ್ಕಳೊಂದಿಗೆ ಹೇಗೂ ಆಟವಾಡಿಕೊಂಡು ಇದ್ದಾರೆ. ಅಂಗನವಾಡಿಯಲ್ಲಿ ಆಟವಾಡುತ್ತಾ ಕಲಿಯುವುದು ಅದಕ್ಕಿಂತಲೂ ಅಪಾಯಕಾರಿ ಹೇಗೆ ಆಗುತ್ತದೆ ಎಂದು ಅವರು ಪ್ರಶ್ನಿಸುತ್ತಾರೆ. ಜಮೀನುಗಳಲ್ಲಿ ಕೆಲಸ ಮಾಡಲು ಹೋಗುವ ಪೋಷಕರು ತಮ್ಮ ಮಕ್ಕಳನ್ನು ತಮ್ಮೊಂದಿಗೆ ಕರೆದುಕೊಂಡು ಹೋಗಿ ಬಿಸಿಲಿನಲ್ಲಿ ಬಿಡುವುದಕ್ಕಿಂತ ಮತ್ತು ಮನೆಯಲ್ಲಿ ಹಿರಿಯರ ಜೊತೆ ಬಿಟ್ಟುಹೋಗುವುದಕ್ಕಿಂತ ಅಂಗನವಾಡಿಗಳಲ್ಲಿ ಬಿಟ್ಟುಹೋಗಲು ಬಯಸುತ್ತಾರೆ. ಪಟ್ಟಣ ಮತ್ತು ಅರೆಪಟ್ಟಣ ಪ್ರದೇಶಗಳಲ್ಲಿ ಮಹಿಳೆಯರು ಸಾಮಾನ್ಯವಾಗಿ ದಿನಗೂಲಿಗೆ ಅಥವಾ ಬೇರೆಯವರ ಮನೆಗಳಲ್ಲಿ ಕೆಲಸ ಮಾಡಲು ಹೋಗುವ ಕಾರಣ ಮಕ್ಕಳನ್ನು ನೋಡಿಕೊಳ್ಳಲು ಮನೆಯಲ್ಲಿ ಸೂಕ್ತ ವ್ಯವಸ್ಥೆ ಇರುವುದಿಲ್ಲ. ಪ್ರಸ್ತುತ, ಈ ಮಕ್ಕಳನ್ನು ಅವರಿಗಿಂತ ಸ್ವಲ್ಪ ದೊಡ್ಡ ಮಕ್ಕಳ ಸುಪರ್ದಿಯಲ್ಲಿ ಬಿಟ್ಟುಹೋಗಬೇಕಾಗಿದೆ.

ಗ್ರಾಮ ಪಂಚಾಯತ್‌ಗಳು ತಮ್ಮ ವ್ಯಾಪ್ತಿಯ ಹಳ್ಳಿಗಳಲ್ಲಿ ವ್ಯಾಕ್ಸಿನೇಷನ್ ಕಡ್ಡಾಯಗೊಳಿಸಿ, ಶೇಕಡಾ ೭೦ರಷ್ಟು ವ್ಯಾಕ್ಸಿನೇಷನ್ ಗುರಿ ತಲುಪಿರಬೇಕು ಹಾಗೂ ಆ ಬಳಿಕ ಅಂತಹ ಗ್ರಾಮಗಳಲ್ಲಿ ಅಂಗನವಾಡಿ ಕೇಂದ್ರಗಳನ್ನು ಪುನರಾರಂಭಿಸಬೇಕು.

**ಅಂಗನವಾಡಿ ಪುನರಾರಂಭಕ್ಕೂ ಮುನ್ನ ಶಿಕ್ಷಕರು ಈ ಕೆಳಗಿನ ಕೆಲವು ಪೂರ್ವ ತಯಾರಿಗಳನ್ನು ಮಾಡಿಕೊಳ್ಳಬೇಕು:**

1. ಎಷ್ಟೋ ಸ್ಥಳಗಳಲ್ಲಿ ಅಂಗನವಾಡಿಗಳು ಹಲವು ತಿಂಗಳುಗಳಿಂದ ತೆರೆಯದೇ ಇರುವ ಕಾರಣ ಹಾಗೂ ಈ ಕೇಂದ್ರಗಳನ್ನು ದಿನಸಿ ಶೇಖರಿಸಿಡಲು ಬಳಸಿರುವ ಕಾರಣ, ಈಗ ಅಂಗನವಾಡಿಗಳನ್ನು ಸಮರ್ಪಕವಾಗಿ ಸ್ವಚ್ಛಗೊಳಿಸಿರಬೇಕು.

2. ಕಿಟಕಿ ಬಾಗಿಲುಗಳನ್ನು ಸರಿಯಾಗಿ ತೆರೆದಿಟ್ಟು ಗಾಳಿ ಬೆಳಕು ಸ್ವಚ್ಛಂದವಾಗಿರುವಂತೆ ನೋಡಿಕೊಳ್ಳಬೇಕು.

3. ಮಕ್ಕಳು ಆಟವಾಡುವ ಸ್ಥಳ ಮತ್ತು ಸಾಮಗ್ರಿಗಳನ್ನು ಸರಿಯಾಗಿ ವೈರಾಣುಮುಕ್ತವಾಗಿ (ಸ್ಯಾನಿಟೈಸ್) ಮಾಡಬೇಕು.

4. ಸ್ವಚ್ಛತಾ ಉಪಕ್ರಮಗಳ ಬಗ್ಗೆ ಊರಿನ ಜನರಲ್ಲಿ ಜಾಗೃತಿ ಮೂಡಿಸಬೇಕು.

5. ಒಂದು ವೇಳೆ ಮಕ್ಕಳ ದಾಖಲಾತಿ ಪ್ರಮಾಣ ಹೆಚ್ಚು ಇದ್ದಲ್ಲಿ, ಮಕ್ಕಳನ್ನು ಒಳಾಂಗಣ ಮತ್ತು ಹೊರಾಂಗಣ ಆಟಗಳಿಗೆ ಗುಂಪುಗಳಾಗಿ ವಿಭಾಗಿಸಬಹುದು. ಆದರೂ, ಹೊರಾಂಗಣದಲ್ಲಿ ಸಾಕಷ್ಟು ಸ್ಥಳಾವಕಾಶ ಇದ್ದಲ್ಲಿ ಎಲ್ಲಾ ಚಟುವಟಿಕೆಗಳನ್ನು ಮುಕ್ತ ವಾತಾವರಣದಲ್ಲಿಯೇ ನಡೆಸಲು ಆದ್ಯತೆ ನೀಡಬೇಕು.

6. ಅಂಗನವಾಡಿಗೆ ತಮ್ಮ ಸೌಲಭ್ಯಗಳನ್ನು ಪಡೆಯಲು ಬರುವ ಹಾಲುಣಿಸುವ ತಾಯಂದಿರು ಮತ್ತು ಗರ್ಭಿಣಿಯರಿಂದ ಮಕ್ಕಳನ್ನು ದೂರವಿರಿಸಿ.

**ಅಂಗನವಾಡಿ ಶಿಕ್ಷಕರ ಸಾಮರ್ಥ್ಯ ಹೆಚ್ಚಿಸುವುದು**

ಕಾರ್ಯಾಗಾರಗಳಿಗೆ ಹಾಜರಾಗುವ ಎಷ್ಟೋ ಅಂಗನವಾಡಿ ಶಿಕ್ಷಕರು ಕೂಡಾ, ತಾವು ಬೋಧನೆಯಿಂದ ದೀರ್ಘಕಾಲ ಹೊರಗುಳಿದಿದ್ದ ಕಾರಣ ತಮ್ಮ ಬೋಧನಾ ಸಾಮರ್ಥ್ಯವೂ ಕುಂಠಿತವಾಗಿದೆ ಎಂದು ಹೇಳಿಕೊಂಡಿದ್ದಾರೆ. ಕೆಲವು ಶಿಕ್ಷಕಿಯರು ದಿನಸಿ ವಿತರಣೆಗೆ ಮನೆ ಮನೆಗೆ ಭೇಟಿ ನೀಡಿದಾಗ ಮಕ್ಕಳೊಂದಿಗೆ ಅಂಗನವಾಡಿಯಲ್ಲಿನ ಚಟುವಟಿಕೆಗಳನ್ನು ಮಾಡಿದ್ದಾಗಿ ಹೇಳಿದ್ದಾರೆ. ಅಂಗನವಾಡಿ ಶಿಕ್ಷಕಿಯರು ಇಸಿಇ (ಆರಂಭಿಕ ಬಾಲ್ಯಾವಸ್ಥೆ ಶಿಕ್ಷಣ- Early Childhood Education) ಕಾರ್ಯಗಳಲ್ಲಿ ಮತ್ತೆ

ತೊಡಗಿಸಿಕೊಳ್ಳುವಂತೆ ಮಾಡಲು, ಕಾರ್ಯಾಗಾರಗಳು, ಪ್ರಾತ್ಯಕ್ಷಿಕೆಗಳು, ಪ್ರಾಜೆಕ್ಟ್ ಹಂತದ ಸಭೆಗಳು ಹೀಗೆ ಸರಣಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅಂಗನವಾಡಿ ಶಿಕ್ಷಕಿಯರಿಗೆ ತಮ್ಮ ಕೇಂದ್ರಗಳನ್ನು ಸಮಪರ್ಕವಾಗಿ ಕಾರ್ಯ ನಿರ್ವಹಿಸುವ ನಿಟ್ಟಿನಲ್ಲಿ ಉತ್ತೇಜನ ನೀಡಬೇಕು. ಪಠ್ಯಕ್ರಮದ ಅಭ್ಯಾಸವೇ ಶಿಕ್ಷಕಿಯರಿಗೆ ನೀಡುವ ಈ ಚಟುವಟಿಕೆಗಳ ಆದ್ಯತೆಯಾಗಬೇಕು.

ಈ ಕಾರ್ಯಾಗಾರಗಳಲ್ಲಿ ಮೂಲಭೂತ ಮತ್ತು ಸಮರ್ಪಕ ಚಟುವಟಿಕೆಗಳ ಮೇಲೆ ಗಮನ ನೀಡುವುದೇ ಆದ್ಯತೆಯಾಗಬೇಕು. ಅಂದರೆ, ಸ್ವಚ್ಛತಾ ಅಭ್ಯಾಸಗಳು, ಹಾಡು, ಕತೆ ಹೇಳುವುದು, ನಾಟಕ ಮತ್ತು ಕ್ರಿಯಾಶೀಲ ಚಟುವಟಿಕೆಗಳು ಆದ್ಯತೆಯಾಗಬೇಕು. ಶಿಕ್ಷಕಿಯರು ತಮ್ಮ ಕೇಂದ್ರದ ಮಕ್ಕಳೊಂದಿಗೆ ಹೆಚ್ಚಿನ ಚಟುವಟಿಕೆಯಿಂದ ಕಾಲ ಕಳೆಯುವುದು ಅತ್ಯವಶ್ಯ.

**ಅಂತಿಮ ಟಿಪ್ಪಣಿ:** ಸಮಗ್ರ ರಾಷ್ಟ್ರೀಯ ಪೌಷ್ಟಿಕ ಸಮೀಕ್ಷೆ 2016-18ನ್ನು ಕೇಂದ್ರದ ಆರೋಗ್ಯ ಸಚಿವಾಲಯವು ಕೈಗೊಂಡಿತ್ತು.

**ಅನುಬಂಧ:** ಕೇಂದ್ರ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ (2019). ಸಮಗ್ರ ರಾಷ್ಟ್ರೀಯ ಪೌಷ್ಟಿಕ ಸಮೀಕ್ಷೆಯ (2016-18) ವರದಿಗಳು; ಪ್ರಾರಂಭಿಕ ಬಾಲ್ಯಾವಸ್ಥೆ ಶಿಕ್ಷಣ ಉಪಕ್ರಮ ಸಂಗಾರೆಡ್ಡಿ (2021). ಇಸಿಇ ಎರಡನೇ ಹಂತದ ಕ್ರಮಗಳು, ಸಂಗಾರೆಡ್ಡಿ, ಅಜೀಂ ಪ್ರೇಮ್‌ಜಿ ಫೌಂಡೇಷನ್.

**ಯೋಗೇಶ್ ಜಿ.ಆರ್. ಅವರು ತೆಲಂಗಾಣದ ಸಂಗಾರೆಡ್ಡಿಯ ಅಜೀಂ ಪ್ರೇಮ್‌ಜಿ ಫೌಂಡೇಷನ್‌ನ ಪ್ರಾರಂಭಿಕ ಬಾಲ್ಯಾವಸ್ಥೆ ಶಿಕ್ಷಣ (ಇಸಿಇ) ಉಪಕ್ರಮದ ಮುಖ್ಯಸ್ಥರು. ಇಸಿಇ ಸಂಪನ್ಮೂಲ ವ್ಯಕ್ತಿಗಳ ತಂಡವನ್ನು ಕಟ್ಟುವಲ್ಲಿ ಮತ್ತು ಮಾರ್ಗದರ್ಶನ ನೀಡುವಲ್ಲಿ ಅವರು ಮುಖ್ಯ ಕೇಂದ್ರಬಿಂದು ಮತ್ತು ಅಂಗನವಾಡಿ ಶಿಕ್ಷಕರ ಸಾಮರ್ಥ್ಯಾಭಿವೃದ್ಧಿಯನ್ನು ಹೆಚ್ಚಿಸಲು ಶ್ರೇಣೀಕರಿಸುವಂತಹ ಬಹು-ಮಾದರಿ ಕಾರ್ಯಾಗಾರಗಳನ್ನು ವಿನ್ಯಾಸ ಮಾಡಿದ್ದಾರೆ. ಇದಕ್ಕೂ ಮುಂಚೆ ಅವರು ಫೌಂಡೇಷನ್‌ನ, ಪಾಂಡಿಚೇರಿ ಜಿಲ್ಲೆಯ ಸಂಸ್ಥೆಯಲ್ಲಿ ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಶಾಲಾ ಶಿಕ್ಷಕರಿಗಾಗಿ**

**ಸಾಮರ್ಥ್ಯವರ್ಧನೆಯಲ್ಲಿ ಕಾರ್ಯ ನಿರ್ವಹಿಸಿದ್ದಾರೆ.** ಅವರು **ಶೈಕ್ಷಣಿಕ**, **ಐಟಿ ಮತ್ತು ಮ್ಯಾನೇಜ್‌ಮೆಂಟ್ ಕ್ಷೇತ್ರಗಳಲ್ಲಿ** 22**ವರ್ಷಗಳಿಂದ ಬೇರೆ ಬೇರೆ ಸ್ಥಾನಗಳಲ್ಲಿ ಕೆಲಸ ಮಾಡುತ್ತಿದ್ದಾರೆ.**

**ಇವರನ್ನು yogesh.r@azimpremjifoundation.org ಇಮೇಲ್ ಐಡಿಯಲ್ಲಿ ಸಂಪರ್ಕಿಸಬಹುದು.**

ಅನುವಾದ:

ಪರಿಶೀಲನೆ: ಲತ ಕೆ.ಸಿ.